| Register No.: |
|---|
| Date : |

ST. JOSEPH'S COLLEGE (AUTONOMOUS) BENGALURU – 560 027

B.A. III rd. SEMESTER EXAMINATION, JANUARY – 2022.

KAA – 318 – KANNADA

Time : 2 ½ hrs Max. Marks : 70

This paper contains two printed pages and five parts

## ಭಾಗ – 1 ಕಾವ್ಯ

ಕೊಟ್ಟಿರುವ ಸೂಚನೆಗಳಿಗೆ ಅನುಗುಣವಾಗಿ ಉತ್ತರಿಸಿ.

I. ಒಂದು ಪದ್ಯದ ಭಾವಾರ್ಥವನ್ನು ಬರೆಯಿರಿ . ೧ x ೫ = ೫

೧) ರತ್ನದ ರಸದಾ ಕಾರಂಜೀಯೂ
ಪುಟಪುಟನೇ ಪುಟಿದು
ತಾನೇ- ಪುಟಪುಟನೇ ಪುಟಿದು
ಘಮಘಮಿಸುವಾ ಮುಗಿದ ಮೊಗ್ಗೀ
ಪಟಪಟನೆ ಒಡೆದು
ತಾನೇ- ಪಟಪಟನೆ ಒಡೆದು

೨) ಮಿರುಗುಬಣ್ಣಕೆ ಬೆರೆತು, ಭಯಮರೆತು, ಕೊಬ್ಬಿದೆನು;
ಮೆರೆದಾಯ್ತು; ನೆನೆಯದಿರು ಹಿಂದಿನದೆಲ್ಲ.
ಇಷ್ಟು ದಿನ ಸಲಹಿರುವೆ ಮೂರ್ಖನನು; ಮುಂದೆಯೂ
ಕೈಹಿಡಿದು ನಡೆಸದಿಹೆಯಾ ?

II. ಕೆಳಗಿನವುಗಳಲ್ಲಿ ಮೂರನ್ನು ಸಂದರ್ಭಸಹಿತ ವಿವರಿಸಿ. ೩x ೫ = ೧೫

೩) ಸರ್ವಲೋಕ ಭಯಂಕರನ್ ಆ ಮಹೇಂದ್ರಾರಿ!
೪) ಎನ್ನ ಕೈ ಹಿಡಿದವರು ಇವಳ ಕೈಯನು ಹಿಡಿದು ಸಾಕಲಾರರೆ?
೫) ಇದು ಬರಿ - ಬೆಳಗಲ್ಲೋ ಅಣ್ಣಾ.
೬) ಚಂಡ ವ್ಯಾಘ್ರನೆ ನೀನಿದೆಲ್ಲವ
ನುಂಡು ಸಂತಸದಿಂದಿರು
೭) ಒಬ್ಬ ಗಂಡಗೆ ಹೆಂಡತಿಯರಿಬ್ಬರಿರರೆ
೮) ಹೆಪ್ಪಾಯ್ತು ಹೊತ್ತಿನ ಹೊನಲ್!

III. ಕೆಳಗಿನವುಗಳಲ್ಲಿ ಎರಡು ಪ್ರಶ್ನೆಗಳಿಗೆ ವಿಮರ್ಶಾತ್ಮಕವಾಗಿ ಉತ್ತರಿಸಿ ೨ x೧೦ = ೨೦

೯) ಮಾಯೆಯ ಮಳೆಗೆ ಸಿಕ್ಕಿದ ದೇಹದ ಸ್ಥಿತಿಯನ್ನು ಷರೀಫರು ಹೇಗೆ ಚಿತ್ರಿಸಿದ್ದಾರೆ ? ವಿವರಿಸಿ.
೧೦) "ಮದಲಿಂಗನ ಕಣಿವೆ" ಎಂದು ಆ ಕಣಿವೆಗೆ ಹೆಸರು ಬರಲು ಕಾರಣವೇನು ? ವಿಶದಪಡಿಸಿ.
೧೧) ಬೇಂದ್ರೆಯವರ "ಬೆಳಗು" ಹೇಗೆ ಒಂದು ಉತ್ತಮ ಪ್ರಕೃತಿಯಾಗಿದೆ ಎಂಬುದನ್ನು ಚರ್ಚಿಸಿ.
೧೨) "ಗೋವಿನ ಹಾಡು" ಗೀತೆಯಲ್ಲಿ ವ್ಯಕ್ತವಾಗುವ ಮಾನವೀಯ ಮೌಲ್ಯಗಳನ್ನು ವಿವರಿಸಿ.

## ಭಾಗ – 2– ಲೇಖನಗಳು

IV. ಕೆಳಗಿನವುಗಳಲ್ಲಿ ಎರಡು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ. ೨ X ೧೦= ೨೦

೧೩) ಎಚ್.ನರಸಿಂಹಯ್ಯನವರು ವೈಚಾರಿಕ ಮನೋಭಾವವನ್ನು ಹೇಗೆ ಬೆಳೆಸಿಕೊಳ್ಳಬೇಕೆಂದಿದ್ದಾರೆ ? ವಿವರಿಸಿ

೧೪) ಪುರಾಣ ಮತ್ತು ಇತಿಹಾಸದಲ್ಲಿ ಬರುವ ಆದರ್ಶನಾರಿಯರ ಕುರಿತು ಬರೆಯಿರಿ.

೧೫) "ನಮ್ಮ ಅಳತೆಯನ್ನು ಮೀರಲಾರದ ದೇವರು" ಲೇಖನದ ಸಾರಾಂಶವನ್ನು ಬರೆಯಿರಿ.

೧೬) ಅದೃಷ್ಟ ನಂಬಿ ಬದುಕುವುದಕ್ಕಿಂತ 'ಪ್ರಾಮಾಣಿಕ ಪ್ರಯತ್ನ' ದಿಂದಲೇ ಯಶಸ್ಸು ಸಾಧ್ಯ ಎನ್ನುವ ನೇಮಿಚಂದ್ರ ಅವರ ಚಿಂತನೆಗಳೇನು ? ವಿವರಿಸಿ.

V. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ. ೧ X ೧೦= ೧೦

೧೭) ಖಗೋಳ ವಿಜ್ಞಾನದ ಅಡಿಪಾಯ ಯಾವುದು?

೧೮) ಧ್ಯಾನ ಮತ್ತು ಭಜನೆಯಿಂದ ಏನನ್ನು ಕಲಿಯಬಹುದು?

೧೯) ಇಂದ್ರನ ಮಾಯಾಜಾಲಕ್ಕೆ ಬಲಿಯಾದವರು ಯಾರು?

೨೦) ಹೆಣ್ಣಿನ ಸ್ಥಿರ ಮಾದರಿಗಳು ಯಾವುವು?

೨೧) ಆಯ್ಕೆಯಿದೆ ನಮ್ಮ ಕೈಯಲ್ಲಿ – ಲೇಖನದ ಕರ್ತೃ ಯಾರು?

೨೨) ಧರ್ಮ ಸಾಮಾನ್ಯವಾಗಿ ಯಾವ ವಾಣಿಯಿಂದ ಮಾತನಾಡುತ್ತದೆ?

೨೩) ನಮ್ಮ ಭಾವನೆಗಳ ಅಡಿಗಲ್ಲು ಯಾವುದು?

೨೪) ಸತ್ಯ ಶೋಧನೆಗೆ ಯಾವ ಮಾರ್ಗ ಸರಿಯಾದುದು?

೨೫) ಸಮಾಜದ ಹರಿಕಾರರೆಂದು ಯಾರನ್ನು ಕರೆಯಲಾಗುತ್ತಿತ್ತು?

೨೬) ಹೆಣ್ಣಿನ ಮೇಲೆ ನಡೆಯುವ ದೌರ್ಜನ್ಯ ಯಾವುದನ್ನು ಗುರಿಯಾಗಿಸಿಕೊಂಡಿದೆ?

---